*ಇ) ಈ ರೀತಿ ಸರ್ಕಾರದ ಹಣ ಸಮವಾಗಿ ಕೊಡದಿರಲು ಕಾರಣವೇನು?*

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಎರಡು ತಾಲ್ಲೂಕುಗಳು. ಶಿರಾ ಮತ್ತು ಕೊರಟಗೆರೆ.

ಆ) ಲೋಕೋಪಯೋಗಿ ಇಲಾಖೆ ವ್ಯಾಪ್ತಿಯ ಅಭಿವೃದ್ಧಿ ಕಾಮಗಾರಿಗಳಿಗೆ ಆಗಿರುವ ವೆಚ್ಚ ಕೆಳಕಂಡಂತಿದೆ:

(ಲಕ್ಷ ರೂ.ಗಳಲ್ಲಿ)

| ವರ್ಷ | ಶಿರಾ ತಾಲ್ಲೂಕು | ಕೊರಟಗೆರೆ ತಾಲ್ಲೂಕು |
|---|---|---|
| 1990-91 | 24.44 | 9.54 |
| 1991-92 | 58.50 | 36.71 |
| 1992-93 | 36.52 | 21.84 |
| 1993-94 (ಜನವರಿ 94ವರೆಗೆ) | 14.58 | 16.68 |

ಇ) ಲೋಕೋಪಯೋಗಿ ಇಲಾಖೆಯಲ್ಲಿ ತಾಲ್ಲೂಕುವಾರು ಹಣ ಭರವಸೆ ಪತ್ರ ನೀಡುವುದಿಲ್ಲ. ಆಯಾ ಲೋಕೋಪಯೋಗಿ ವಿಭಾಗಗಳಲ್ಲಿ ಆಯವ್ಯಯದಲ್ಲಿ ಸೇರಿಸಿದಂತಹ ಕಾಮಗಾರಿಯನ್ನು ಪರಿಗಣಿಸಿ ಅನುದಾನ ನಿಗದಿಪಡಿಸಿರುತ್ತದೆ. ರಸ್ತೆ ನಿರ್ವಹಣೆಗೆ ಅನುದಾನವನ್ನು ರಸ್ತೆಗಳ ಪ್ರತಿ ಕಿ.ಮೀ. ಉದ್ದವನ್ನು ಪರಿಗಣಿಸಿ ನಿಗದಿಪಡಿಸಲಾಗುವುದು. ಪ್ರತಿ ವಿಧಾನ ಸಭಾ ಕ್ಷೇತ್ರದ ರಸ್ತೆ ಮತ್ತು ಸೇತುವೆಗಳ ಅಭಿವೃದ್ಧಿಗಾಗಿ ಎಲ್ಲಾ ಕ್ಷೇತ್ರಕ್ಕೂ ಸಮನಾಗಿ ಅನುದಾನ ನಿಗದಿಪಡಿಸಲಾಗುತ್ತಿದೆ.

**ಕೊರಟಗೆರೆ-ದಾಬಸ್‌ಪೇಟೆ ರಸ್ತೆಯಲ್ಲಿ ರೈಲ್ವೆ ಲೈನ್ ಮೇಲೆ ಓವರ್ ಬ್ರಿಡ್ಜ್**

311 - ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಕೊರಟಗೆರೆ - ದಾಬಸ್ಪೇಟೆ ಪ್ರಧಾನ ರಸ್ತೆಯಲ್ಲಿ ರೈಲ್ವೆ ಲೈನ್ ಮೇಲೆ ಓವರ್ ಬ್ರಿಡ್ಜ್ ಇದ್ದದನ್ನು ರೈಲ್ವೆ ಸಿಬ್ಬಂದಿಯವರು ಕೆಡವಿಹಾಕಿ ಬಸ್ಸು ಸಂಚಾರ ಹಾಗೂ ಜನ ಜಾನುವಾರುಗಳು ಓಡಾಡಲು ತೊಂದರೆಯಾಗಿರುವುದು. ಸರ್ಕಾರದ ಗಮನಕ್ಕೆ ಬಂದಿದೆಯೇ.*

*ಆ) ಹಾಗಿದ್ದಲ್ಲಿ, ಈ ಹೈ ಲೆವೆಲ್ ಬ್ರಿಡ್ಜ್ ಕಟ್ಟಲು ಸರ್ಕಾರ ಕೈಗೊಂಡಕ್ರಮಗಳೇನು?*

*ಇ) ಸದರಿ ಕೆಲಸ ಎಷ್ಟು ದಿನಗಳಲ್ಲಿ ಪ್ರಾರಂಭವಾಗಲಿದೆ?*

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು):

ಅ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಈ ವಿಷಯದ ಬಗ್ಗೆ ರೈಲ್ವೆ ಇಲಾಖೆಗೆ ಅಂದಾಜನ್ನು ತಯಾರಿಸಲು ಪತ್ರ ಬರೆಯಲಾಗಿದೆ.

ಇ) ವಿಧಿವಿಧಾನಗಳನ್ನು (ಫಾರ್ಮಾಲಿಟೀಸ್) ಪಾಲಿಸಿ, ಹಣ ಲಭ್ಯತೆಯ ಮೇರೆಗೆ ಈ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

**ಲೋಕೋಪಯೋಗಿ ಇಲಾಖೆ ವಸತಿ ಗೃಹಗಳ ನೀರಿನ ಪೂರೈಕೆ ವೆಚ್ಚವನ್ನು ನೌಕರರ ವೇತನ ಪಟ್ಟಿಯಲ್ಲಿ ಮುರಿದುಕೊಳ್ಳುವ ಬಗ್ಗೆ**

331 - ಶ್ರೀ ಮುನಿನರಸಿಂಹಯ್ಯ (ದೇವನಹಳ್ಳಿ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಭೀಮಾನಗರ, ತಿಮ್ಮೇನಹಳ್ಳಿ, ಯಲಹಂಕ ಇತರೆ ಪ್ರದೇಶಗಳಲ್ಲಿರುವ ಸರ್ಕಾರಿ ವಸತಿ ಗೃಹಗಳ ನಿವಾಸಿ ನೌಕರರ ವೇತನ ಪಟ್ಟಿಯಲ್ಲಿ ನೀಡಿದ ಬಿಲ್ಲನ್ನು ತಲಾ ರೂ. 10, 9, 8, 12 ಹೀಗೆ ಹಿಡಿದುಕೊಳ್ಳುತ್ತಿರುವುದು ಸರಿಯಷ್ಟೆ.*

*ಆ) ಆದರೆ ನಂದಿನಿ ಬಡಾವಣೆಯ ಲೋಕೋಪಯೋಗಿ ಇಲಾಖೆಯು ಹಂಚಿಸಿರುವ ವಸತಿ ಗೃಹಗಳ ನೌಕರರಿಗೆ ಈ ರೀತಿ ನೀರಿನ ವೆಚ್ಚವನ್ನು ವೇತನ ಪಟ್ಟಿಯಲ್ಲಿ ಹಿಡಿಯದಿರಲು ಕಾರಣವೇನು?*

*ಇ) ಈ ರೀತಿ ವೇತನ ಪಟ್ಟಿಯಲ್ಲಿ ಹಿಡಿಯದೆ ಇದ್ದುದರಿಂದ ನೀರು ಸರಬರಾಜು ಇಲಾಖೆಯವರು ವಿಧಿಸುತ್ತಿರುವ ನೀರಿನ ಶುಲ್ಕ ಹೆಚ್ಚಾಗಿದ್ದು ಅದನ್ನು ಭರಿಸಲು ನೌಕರರಿಗೆ ತೊಂದರೆಯಾಗಿದ್ದು ಸರ್ಕಾರವು ಕೂಡಲೇ ಈ ತಾರತಮ್ಯವನ್ನು ಸರಿಪಡಿಸುವುದೇ?*

*ಈ) ಹಾಗಾದರೆ ಇನ್ನೆಷ್ಟು ದಿನಗಳಲ್ಲಿ ಅದನ್ನು ಸರಿಪಡಿಸಲಾಗುವುದು.*

*ಉ) ಈ ರೀತಿ ಹೆಚ್ಚಾಗಿ ನೀಡಿದ್ದ ನೀರಿನ ಶುಲ್ಕವನ್ನು ಸಂಬಂಧಪಟ್ಟ ನೌಕರರಿಗೆ ಹಿಂದಿರುಗಿಸಲಾಗುವುದೇ?*

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಬೆಂಗಳೂರು ಜಲ ಮಂಡಳಿಯು ವಸತಿ ಗೃಹಗಳಿಗೆ ಮೀಟರ್ ಅಳವಡಿಸಿರುವ ಕಡೆಗಳಲ್ಲಿ ವಸತಿ ಗೃಹದವರೇ ನೇರವಾಗಿ ನೀರಿನ ಬಿಲ್ಲನ್ನು ಜಲಮಂಡಳಿಗೆ ಪಾವತಿ ಮಾಡುತ್ತಾರೆ.

ವಸತಿ ಗೃಹಗಳಿಗೆ ಬೆಂಗಳೂರು ಜಲ ಮಂಡಳಿಯು ಪ್ರತ್ಯೇಕ ಮೀಟರ್ ಅಳವಡಿಸದೇ ಇರುವ ಕಡೆಗಳಲ್ಲಿ ಲೋಕೋಪಯೋಗಿ ಇಲಾಖೆಯೇ ಜಲ ಮಂಡಳಿಯಿಂದ ಒಟ್ಟಾರೆ ನೀರನ್ನು ಪಡೆದು ಲೋಕೋಪಯೋಗಿ ಇಲಾಖೆಯು ವಸತಿ ಗೃಹಗಳಿಗೆ ನೀರು ಸರಬರಾಜು ಮಾಡುತ್ತದೆ. ಈ ಪ್ರದೇಶಗಳಲ್ಲಿ ಲೋಕೋಪಯೋಗಿ ಇಲಾಖೆ ಸಂಬಂಧಪಟ್ಟ ವಸತಿ ಗೃಹದವರಿಂದ ಸರಾಸರಿ ವೆಚ್ಚವನ್ನು ಅವರ ವೇತನದಲ್ಲಿ ಕಡಿತಗೊಳಿಸಿ ಇಲಾಖೆಯು ಜಲ ಮಂಡಳಿಗೆ ನೀರಿನ ಶುಲ್ಕವನ್ನು ಒಟ್ಟಾರೆಯಾಗಿ ಪಾವತಿ ಮಾಡುತ್ತದೆ.

ವಸತಿ ಗೃಹಗಳಿಗೆ ಪ್ರತ್ಯೇಕ ಮೀಟರ್ ಇರುವ ಪ್ರದೇಶಗಳು ಸಂಬಳದಲಿ:

1) ಜೀವನಭೀಮಾ ನಗರ

2) ಜಯನಗರ

3) ವಸಂತನಗರ

4) ಜಯಮಹಲ್ ವಿಲಾಸ್

ಇಲಾಖೆಯು ನೇರವಾಗಿ ಜಲ ಮಂಡಳಿಗೆ ನೀರಿನ ಬಿಲ್ಲನ್ನು ಪಾವತಿ ಮಾಡುವ ಪ್ರದೇಶಗಳು :

1) ತಿಮ್ಮೇನಹಳ್ಳಿ

2) ವಿಲ್ಸನ್ಗಾರ್ಡನ್

3) ರಾಜಾಜಿನಗರ

ಇಲಾಖೆಯು ಜಲ ಮಂಡಳಿಗೆ ನೇರವಾಗಿ ಪಾವತಿ ಮಾಡುವ ಪ್ರದೇಶಗಳಿಗೆ ನೀರು ಸರಬರಾಜಿನ ವೆಚ್ಚವನ್ನು ಗಮನದಲ್ಲಿಟ್ಟುಕೊಂಡು ಪ್ರದೇಶಗಳಿಂದ ಪ್ರದೇಶಕ್ಕೆ ಸ್ವಲ್ಪ ವ್ಯತ್ಯಾಸವಾಗುತ್ತದೆ.

ಆ) ನಂದಿನಿ ಬಡಾವಣೆಯ ಪ್ರತಿಯೊಂದು ಬ್ಲಾಕ್ ಮನೆಗಳಿಗೆ ಜಲ ಮಂಡಳಿ ಮೀಟರ್ ಅಳವಡಿಸಿರುವುದರಿಂದ ಆ ಬ್ಲಾಕ್ನಲ್ಲಿರುವ ವಸತಿ ಗೃಹದವರೇ ನೇರವಾಗಿ ಬಿಲ್ಲನ್ನು ಜಲ ಮಂಡಳಿಗೆ ಪಾವತಿ ಮಾಡುತ್ತಾರೆ.

ಇ) ಈ ವಿಷಯವು ಬೆಂಗಳೂರು ಜಲ ಮಂಡಳಿಗೆ ಸಂಬಂಧಪಟ್ಟಿರುತ್ತದೆ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಅಧ್ಯಕ್ಷರು : ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುನದೆ ಮಂಡಿಸಲಾಯಿತು.

## ಕಾರ್ಯದರ್ಶಿಗಳ ವರದಿ

ಕಾರ್ಯದರ್ಶಿ : (ಶ್ರೀ ಎನ್.ಎಚ್. ಮುತ್ತಲಗೇರಿ) : ಕರ್ನಾಟಕ ವಿಧಾನ ಸಭೆ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 125 (1)ರ ಮೇರೆಗೆ ಸಂಸತ್ತಿನಿಂದ ಸ್ವೀಕರಿಸಿರುವ ಸಂದೇಶದೊಡನೆ 1992ನೇ ಇಸವಿಯ ಸಂವಿಧಾನದ 72ನೇ ತಿದ್ದುಪಡಿ ವಿಧೇಯಕದ ಪ್ರತಿಯನ್ನು ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು : ಸಭೆಯ ಮುಂದೆ ಮಂಡಿಸಲಾಯಿತು.

## ಪ್ರಸ್ತಾವ

**ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಮತ್ತು ಕರ್ನಾಟಕ ವಿದ್ಯುತ್ ನಿಗಮಗಳ ಕಾರ್ಯನಿರ್ವಹಣೆ ಮತ್ತು ಆಡಳಿತ ದಕ್ಷತೆಯನ್ನು ಉತ್ತಮ ಪಡಿಸಲು ವಿಧಾನ ಮಂಡಲ ಜಂಟೀ ಸದನದ ಸಮಿತಿ ವರದಿಯನ್ನು ನೀಡಲು ಕಾಲಾವಧಿ ವಿಸ್ತರಣೆ.**

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೇ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಮತ್ತು ಕರ್ನಾಟಕ ವಿದ್ಯುತ್ ನಿಗಮಗಳ ಕಾರ್ಯನಿರ್ವಹಣೆ ಮತ್ತು ಆಡಳಿತ ದಕ್ಷತೆಯನ್ನು ಉತ್ತಮಪಡಿಸಲು ಸಲುವಾಗಿ ಸರ್ಕಾರಕ್ಕೆ ಸೂಕ್ತ ಶಿಫಾರಸ್ಸುಗಳನ್ನು ನೀಡಲು ರಚಿಸಿರುವ ವಿಧಾನ ಮಂಡಲದ ಜಂಟೀ ಸದನದ ಸಮಿತಿಗೆ ತನ್ನ ವರದಿಯನ್ನು ನೀಡಲು ಮಾರ್ಚಿ 10 1994ರ ವರೆವಿಗೂ ಕಾಲಾವಕಾಶವನ್ನು ನೀಡಬೇಕೆಂದು ನಾನು ಈ ಸದನವನ್ನು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಮತ್ತು ಕರ್ನಾಟಕ ವಿದ್ಯುತ್ ನಿಗಮಗಳ ಕಾರ್ಯನಿರ್ವಹಣೆ ಮತ್ತು ಆಡಳಿತದಕ್ಷತೆಯನ್ನು ಉತ್ತಮಪಡಿಸುವ ಸಲುವಾಗಿ ಸರ್ಕಾರಕ್ಕೆ ಸೂಕ್ತ ಶಿಫಾರಸ್ಸುಗಳನ್ನು ನೀಡಲು ರಚಿಸಿರುವ ವಿಧಾನ ಮಂಡಲದ ಜಂಟೀ ಸದನದ ಸಮಿತಿಗೆ ತನ್ನ ವರದಿಯನ್ನು ನೀಡಲು ಮಾರ್ಚಿ 10 1994ರ ವರೆವಿಗೂ ಕಾಲಾವಕಾಶವನ್ನು ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಜಂಟಿ ಸದನದಸಮಿತಿಗೆ ಕಾಲಾವಕಾಶವನ್ನು